‘ನಮ್ಮಪ್ಪಂಗೆ ಯಾವಾಗಲೂ ಕಿಚಾಯಿಸ್ತಿರಲ್ಲ. ಈಗ ಅದಕ್ಕೆಲ್ಲಾ ಸರಿಯಾದ ಜಾಗದಲ್ಲಿ ಉತ್ತರ ಸಿಗುತ್ತೆ ನೋಡ್ತಾ ಇರಿ’ ಎಂದು ಕಿವಿಯಲ್ಲಿ ಸೇಡಿನ ನುಡಿ ಪಿಸುಗುಟ್ಟಿದಳು. ‘ಅಯ್ಯೋ ಪಾಪಿ. ನಿನಗೆ ನನ್ಮೇಲೆ ಸೇಡು ತೀರಿಸ್ಕೊಳ್ಳೋಕೆ ಇದೇ ಟೈಮ್ ಬೇಕಾಗಿತ್ತಾ’ ಎಂದು ಅಳುಕುತ್ತಲೇ ಮುಂದಾಗಲಿರುವ ನೋವಿನ ಅನಾಹುತ ಕಲ್ಪಿಸಿಕೊಂಡು ಒಲ್ಲದ ಮನಸ್ಸಿನಿಂದಲೇ ಅಂಗಾತ ಬಿದ್ದುಕೊಂಡೆ.

ನನ್ನ ಕರ್ಮಕ್ಕೆ ಮಾವ ಆ ದಿನ ಕನ್ನಡಕ ಮರೆತು ಬಂದಿದ್ದರು. ಮೇಲಾಗಿ ಕತ್ತಲ ಸಾಮ್ರಾಜ್ಯದ ಆ ಜಾಗ ಅವರಿಗೆ ಸರಿಯಾಗಿ ಕಂಡಿತೋ ಕಾಣಲಿಲ್ಲವೋ? ನಾನರಿಯೆ. ಚೂಪಾದ ಮುಲಾಮಿನ ಟ್ಯೂಬು ಹಿಡಿದು ಆಪರೇಶನ್ ಆದ ಜಾಗವನ್ನು ಬಿಟ್ಟು ಬೇರೆ ಜಾಗದಲ್ಲಿ ಹಾಕಿ ಸರಿಯಾಗಿ ನುಲಿಯತೊಡಗಿದರು. ಜೀವವೇ ಬಾಯಿಗೆ ಬಂದು ವಾಪಸ್ಸು ಹೋಯಿತು. ನಾಚಿಕೆ, ಮಾನ ಮರ್ಯಾದೆ ಎಲ್ಲಾ ಎತ್ತಿ ಬಿಸಾಡಿ, ‘ಅಯ್ಯಯ್ಯೋ... ಅಮ್ಮಮ್ಮ... ಸತ್ತೆ’ ಎಂದು ಕಿರುಚಾಡಿ ಬಿಟ್ಟೆ. ಇದೇ ಎಡವಟ್ಟು ಕೆಲಸ ನನ್ನ ಹೆಂಡತಿ ಮಾಡಿದ್ದರೆ ಕನಿಷ್ಠಪಕ್ಷ ಕೂಗಾಡಬಹುದಿತ್ತು. ಸಾಧ್ಯವಾದರೆ ಬೈಯ್ಯಬಹುದಿತ್ತು. ಆದರೆ ಮಾವಯ್ಯನಿಗೆ ಏನೂ ಹೇಳುವಂತಿಲ್ಲ. ಇತ್ತ ಸುಮ್ಮನಿರುವಂತೆಯೂ ಇಲ್ಲ. ಯಮನೋವಿಗೆ ಅಲುಗಾಡಿ ಹೋದೆ.

ಹೆಂಡತಿಯ ಕರುಣಿಸಿದ ಮುದ್ದುಮಾವ ಮುಲಾಮು ಹಚ್ಚುವ ಭರದಲ್ಲಿ ಹೊಸದೊಂದು ಗಾಯ ಸೃಷ್ಟಿಸಿದ್ದರು. ಆಪರೇಷನ್ ಆದ ಜಾಗ ಬಿಟ್ಟು ಬೇರೆ ಕಡೆ ಒಂದು ಹೊಸ ಗುಂಡಿಯನ್ನೇ ತೋಡಿದ್ದರು. ನಂತರ ಮುಲಾಮಿನ ಮೂತಿ ನೋಡಿದರೆ ಅದರ ತುದಿಯನ್ನೇ ಆಸಾಮಿ ಓಪನ್ ಮಾಡಿರಲಿಲ್ಲ. ‘ಮುಲಾಮು ಬಂತಾ’ ಎಂದು ಅವರು ಒತ್ತುತ್ತಾ ಕೇಳಿದಾಗ ನಾನು ಬಿಟ್ಟರೆ ಸಾಕೆಂದು ‘ಹ್ಞೂ ಬಂತು’ ಎಂದು ಚೀರಿದ್ದೆ. ಬಂದಿದ್ದು ಮುಲಾಮಲ್ಲ, ಹೊಸ ಗಾಯದ ರಕ್ತ. ಅದು ಜಿನುಗಿ ಮಹಜರ್ ಸ್ಥಳ ತಣ್ಣಗಾಗಿದ್ದರಿಂದ ನಾನು ಹಾಗೆ ಹೇಳಿದ್ದೆಂದು ಆಮೇಲೆ ಗೊತ್ತಾಯಿತು.

ಚಶ್ಮಾ ಹಾಕಿಕೊಳ್ಳದೆ ಅಂದಾಜಿನಲ್ಲಿ ಎಲ್ಲೋ ಒತ್ತಿ ಹಿಡಿದು ಬಲವಾಗಿ ಚುಚ್ಚಿ ನನ್ನ ಕಥೆಯನ್ನು ಪಂಚರ್ ಮಾಡಿದ್ದ ಮಾವ ಹಳೆಯ ಸೇಡನ್ನೆಲ್ಲಾ ಒಟ್ಟಿಗೆ ತೀರಿಸಿಕೊಂಡಿದ್ದರು. ಹೆಣ್ಣು ಕೊಟ್ಟ ಮಾವ ಕಣ್ಣು ಕೊಟ್ಟ ದೇವರು ಎಂದು ಯಾವ ಅವಿವೇಕಿ ಹೇಳಿದನೋ ಗೊತ್ತಿಲ್ಲ. ಅವನು ಸಿಕ್ಕರೆ ಸರಿಯಾಗಿ ತದುಕಬೇಕೆಂದು ಹುಡುಕುತ್ತಿರುವೆ. ಆಪರೇಷನ್ ಗಾಯ ವಾಸಿಯಾದ ವಾರದ ಮೇಲೆ ಮಾವ ಮಾಡಿದ ಹೊಸ ಗಾಯ ಮಾಗಿತು ಎಂದರೆ ನಡೆದಿದ್ದ ಅನಾಹುತ ಎಂಥದ್ದೆಂದು ನೀವೂ ಅಂದಾಜಿಸಬಹುದು.

---


## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳನ್ನು ಬರೆದುಕೊಂಡು ಬಂದಿದ್ದಾರೆ. ‘ಪ್ರಜಾವಾಣಿ’ ದಿನಪತ್ರಿಕೆಯ ‘ಕಾಮನಬಿಲ್ಲು’ ಪುರವಣಿಯಲ್ಲಿ ಈ ಹಿಂದೆ ಪ್ರಕಟವಾದ ಅವರ ‘ಕ್ಲಾಸ್‌ಟೀಚರ್’ ಎಂಬ ಅಂಕಣ ಅವರಿಗೆ ಜನಪ್ರಿಯತೆಯ ಜೊತೆಗೆ ಅಪಾರ ಓದುಗರನ್ನು ದೊರಕಿಸಿಕೊಟ್ಟಿತು. ಈ ಅಂಕಣ ಅದೇ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ